ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1156

ಸದಸ್ಯರ ಹೆಸರು : ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 07.03.2022

ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

*****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹೈಬ್ರಿಡ್ ಪವರ್ ಪಾರ್ಕ್ ಸ್ಥಾಪಿಸುವ ಚಿಂತನೆ ಸರ್ಕಾರದ ಮುಂದಿದೆಯೇ: (ಹಾಗಿದ್ದಲ್ಲಿ, ಅದಕ್ಕೆ ಗುರುತಿಸಲಾದ ಜಾಗದ ವಿವರ ನೀಡುವುದು)	ರಾಜ್ಯದಲ್ಲಿ 5000 ಮೆಗಾ ವ್ಯಾಟ್ ಸಾಮರ್ಥ್ಯದ ಹೈಬ್ರಿಡ್ ಪವರ್ ಪಾರ್ಕ್ ನ್ನು ಕೊಪ್ಪಳ, ಧಾರವಾಡ, ಗದಗ, ವಿಜಯಪುರ, ದಾವಣಗೆರೆ, ಚಿತ್ರದುರ್ಗ, ವಿಜಯನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಸ್ಥಾಪಿಸಿ, ಸದರಿ ಹೈಬ್ರಿಡ್ ಪಾರ್ಕ್ ನಿಂದ ಉತ್ಪಾದಿಸುವ ವಿದ್ಯುತ್ತನ್ನು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ಖರೀದಿಗಾಗಿ ಅಥವಾ ಹೊರ ರಾಜ್ಯಗಳಿಗೆ ವಿದ್ಯುತ್ ಸರಬರಾಜು ಮಾಡುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.
ಆ)	ಈ ಹೈಬ್ರಿಡ್ ಪವರ್ ಪಾರ್ಕ್‌ನ ಉದ್ದೇಶ ಮತ್ತು ಇದಕ್ಕಿರುವ ಕೇಂದ್ರ ಸರ್ಕಾರದ ಮಾರ್ಗಸೂಚಿಗಳೇನು: (ವಿವರ ನೀಡುವುದು)	ಹೈಬ್ರಿಡ್ ಪಾರ್ಕ್ ಯೋಜನೆಗಳನ್ನು ಸ್ಥಾಪಿಸುವ ಉದ್ದೇಶಗಳು ಈ ಕೆಳಕಂಡಂತಿವೆ: ➢ ಪವನ ಮತ್ತು ಸೌರ ಯೋಜನೆಗಳ Capacity Utilisation Factor ಕ್ರಮವಾಗಿ 28% ಮತ್ತು 19% ಆಗಿದ್ದು, ಎರಡನ್ನು ಸೇರಿಸಿ, ಹೈಬ್ರಿಡ್ ಯೋಜನೆಗಳನ್ನು ಅನುಷ್ಠಾನಗೊಳಿಸಿದಲ್ಲಿ Capacity Utilisation Factor ಹೆಚ್ಚಾಗುತ್ತದೆ. ➢ ಯೋಜನಾ ಅನುಷ್ಠಾನ ಸ್ಥಳವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಸಹಾಯವಾಗುತ್ತದೆ. ➢ ಹೈಬ್ರಿಡ್ (ಸೌರ ಮತ್ತು ಪವನ) ಯೋಜನೆಗಳು ಒಂದೇ ಸ್ಥಳದಲ್ಲಿ ನಿರ್ಮಿಸಿ, ಅವುಗಳಿಂದ ಉತ್ಪಾದಿಸುವ ವಿದ್ಯುತ್ ನ್ನು KPTCL/PGCIL ಗ್ರಿಡ್ ಗಳಿಗೆ ಜೋಡಿಸುವುದರಿಂದ ಪ್ರಸರಣ ಜಾಲವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಮತ್ತು ಗ್ರಿಡ್ ನಿರ್ವಹಣೆ ಮಾಡಲು ಸಹಾಯವಾಗುತ್ತದೆ. ಇದರಿಂದ, ಹೆಚ್ಚುವರಿ ಪ್ರಸರಣ ಮೂಲಭೂತ ಸೌಕರ್ಯ ಕಲ್ಪಿಸುವುದನ್ನು ತಪ್ಪಿಸಿದಂತಾಗುತ್ತದೆ. ➢ ಪವನ ಮತ್ತು ಸೌರ ವಿದ್ಯುತ್ ಲಭ್ಯತೆಯ ಸಮಯವು ಬೇರೆ-ಬೇರೆಯಾಗಿದ್ದು, ಹೈಬ್ರಿಡ್ ಯೋಜನೆಗಳಿಂದ ಗ್ರಿಡ್ ನಿರ್ವಹಣೆಗೆ ಸಹಾಯವಾಗುತ್ತದೆ. ➢ ಹೈಬ್ರಿಡ್ ಯೋಜನೆಗಳನ್ನು ಸೌರ PV, ಗಾಳಿ ಮತ್ತು ಶೇಖರಣಾ ತಂತ್ರಜ್ಞಾನಗಳನ್ನು ಮಿಶ್ರಣ ಮಾಡುವುದರಿಂದ ಉತ್ತಮ ವಿದ್ಯುತ್ ಪೂರೈಕೆಯನ್ನು ಸ್ಪರ್ಧಾತ್ಮಕ ಕಡಿಮೆ ದರಗಳಲ್ಲಿ ನೀಡಬಹುದಾಗಿದೆ. ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ದಿನಾಂಕ: 13-11-2020 ರಲ್ಲಿ ವಿಂಡ್ ಪಾರ್ಕ್/ವಿಂಡ್ ಸೋಲಾರ್ ಹೈಬ್ರಿಡ್ ಪಾರ್ಕ್ ನ ಪರಿಕಲ್ಪನೆ ಟಿಪ್ಪಣಿ (Concept Note) ಯನ್ನು ಜಾರಿಗೊಳಿಸಿದ್ದು, ಅಂತಿಮ ಮಾರ್ಗ ಸೂಚಿಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಇ) ಇಂಧನ ಇಲಾಖೆಯು ರಾಜ್ಯ ಸರ್ಕಾರದ ಇತರೆ ಇಲಾಖೆಗಳ ಖಾಲಿ ಜಾಗ ಮತ್ತು ಕಟ್ಟಡಗಳ ಮೇಲೆ ಸೌರ ಫಲಕಗಳನ್ನು ಅಳವಡಿಸಿ ವಿದ್ಯುತ್‌ನ್ನು ಉತ್ಪಾದಿಸುವ ಬಗ್ಗೆ ಸರ್ಕಾರದ ಚಿಂತನೆಗಳೇನು: ಈ ಬಗ್ಗೆ ಇರುವ ಮಾರ್ಗಸೂಚಿಗಳೇನು: (ಮಾಹಿತಿ ನೀಡುವುದು)

ಸೌರ ನೀತಿ 2014-21 ರ ಮಾರ್ಗಸೂಚಿಗಳನ್ವಯ ರಾಜ್ಯ ಸರ್ಕಾರದ ಇತರೆ ಇಲಾಖೆಗಳು ತಮ್ಮ ಇಲಾಖೆಗಳ ಖಾಲಿ ಜಾಗ ಮತ್ತು ಕಟ್ಟಡಗಳ ಮೇಲೆ ಸೌರ ಘಟಕಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮಾರ್ಗಸೂಚಿಗಳನ್ವಯ ಅಳವಡಿಸಿಕೊಳ್ಳಬಹುದಾಗಿದ್ದು, ಇದಕ್ಕೆ ಪ್ರಸ್ತುತ ರಾಜ್ಯ ಸರ್ಕಾರದ ವತಿಯಿಂದ ಯಾವುದೇ ಸಹಾಯಧನ/ಅನುದಾನವನ್ನು ನೀಡುತ್ತಿಲ್ಲ.

ಆದರೆ, ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕೇಂದ್ರ ಸರ್ಕಾರದ ಐ.ಪಿ.ಡಿ.ಎಸ್ ಯೋಜನೆ ಮತ್ತು 13ನೇ ಹಣಕಾಸು ಆಯೋಗವು ರಾಜ್ಯ ಸರ್ಕಾರಕ್ಕೆ ನೀಡಿದ್ದ ಪ್ರೋತ್ಸಾಹಕ ಅನುದಾನದಲ್ಲಿ ಸರ್ಕಾರಿ ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಸೌರ ಫಲಕಗಳನ್ನು ಅಳವಡಿಸಿ ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ.

ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು ಈ ಕೆಳಗಿನಂತಿದೆ:

ಐ.ಪಿ.ಡಿ.ಎಸ್ ಯೋಜನೆ: (ಯೋಜನೆ ಪೂರ್ಣಗೊಂಡಿದೆ)

ವಿಸಕಂ	ಸರ್ಕಾರಿ ಕಟ್ಟಡಗಳ ಸಂಖ್ಯೆ	ಅನುಷ್ಠಾನಗೊಳಿಸಲಾದ ಸಾಮರ್ಥ್ಯ (ಮೆ.ವ್ಯಾ ಗಳಲ್ಲಿ)
ಬೆವಿಕಂ	51	0.674
ಗುವಿಕಂ	77	1.670
ಹುವಿಕಂ	233	1.822
ಮವಿಕಂ	56	1.351
ಚಾವಿಸನಿನಿ	774	2.806
ಒಟ್ಟು	**1191**	**8.323**

13ನೇ ಹಣಕಾಸು ಆಯೋಗದ ಪ್ರೋತ್ಸಾಹಕ ಅನುದಾನದಡಿ:

ವಿಸಕಂ	ಪೂರ್ಣಗೊಂಡ ಕಾಮಗಾರಿಗಳ ವಿವರ		ಕಾಮಗಾರಿ/ಟೆಂಡರ್ ಪ್ರಗತಿಯಲ್ಲಿರುವ ವಿವರಗಳು	
	ಸರ್ಕಾರಿ ಕಟ್ಟಡಗಳ ಸಂಖ್ಯೆ	ಸಾಮರ್ಥ್ಯ (ಮೆ.ವ್ಯಾ ಗಳಲ್ಲಿ)	ಸರ್ಕಾರಿ ಕಟ್ಟಡಗಳ ಸಂಖ್ಯೆ	ಸಾಮರ್ಥ್ಯ (ಮೆ.ವ್ಯಾ ಗಳಲ್ಲಿ)
ಬೆವಿಕಂ	40	3.713	102	4.342
ಗುವಿಕಂ	88	2.442	776	0.880
ಹುವಿಕಂ	340	2.883	-	-
ಮವಿಕಂ	56	0.817	22	0.26
ಚಾವಿಸನಿನಿ	580	1.85	-	-
ಒಟ್ಟು	**1104**	**11.705**	**900**	**5.482**

ಸಂಖ್ಯೆ: ಎನರ್ಜಿ 41 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು